**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ: ಸಿ4(7)(1)ಪ್ರೌಶಿಹೆಶಿಸ್ಥ.72/2012-13 ದಿನಾಂಕ: 19-07-2013

**ಜ್ಞಾಪನ**

ವಿಷಯ: ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸುವ ಬಗ್ಗೆ

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ: ಇಡಿ 69 ಎಲ್‌ಬಿಪಿ 2011, ದಿ:01.04.2011
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 173 ಇಟಿಆರ್ 2007, ದಿ:15.10.2007.
3. ಈ ಕಛೇರಿಯ ಸುತ್ತೋಲೆ ಪತ್ರ ದಿನಾಂಕ:02.03.2012 ಮತ್ತು 10.07.2012
4. ಈ ಕಛೇರಿಯ ಜ್ಞಾಪನ ಸಮಸಂಖ್ಯೆ ದಿನಾಂಕ:22.03.2012
5. ಈ ಕಛೇರಿಯ ಟಿಪ್ಪಣಿ ಸಂಖ್ಯೆನಿ.(ಪ್ರೌ.ಶಿ)ಹೆಚ್ಚುವರಿ ಶಿಕ್ಷಕರು-01/2012.13 ದಿ:30.06.2012
6. ಸರ್ಕಾರದ ಪತ್ರ ಸಂಖ್ಯೆ ಇಡಿ380 ಎಲ್‌ಬಿಪಿ 2012 ದಿನಾಂಕ:-31-12-2012
7. ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ಪತ್ರ ದಿನಾಂಕ:-06-03-13, 20-03-13, 02-05-13

*******

ಉಲ್ಲೇಖ (7) ರ ಈ ಕಛೇರಿ ಸಮ ಸಂಖ್ಯೆಗಳ ಸುತ್ತೋಲೆಗಳಲ್ಲಿ 2013-14ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸುವ ಬಗ್ಗೆ ವೇಳಾಪಟ್ಟಿಯನ್ನು ನಿಗಧಿಗೊಳಿಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ತಿಳಿಸಲಾಗಿತ್ತು. ಆದರೆ ಈ ಮಧ್ಯೆ ಚುನಾವಣಾ ನೀತಿ ಸಂಹಿತೆ ಜಾರಿಯಾದ ಪ್ರಯುಕ್ತ ಈ ಪ್ರಕ್ರಿಯೆ ಸ್ಥಗಿತಗೊಂಡಿರುತ್ತದೆ. ಚುನಾವಣಾ ಕಾರ್ಯದ ನಿಮಿತ್ತ ಸ್ಥಗಿತಗೊಂಡಿದ್ದ ಪ್ರಕ್ರಿಯೆಯನ್ನು ಮತ್ತೆ ಪ್ರಾರಂಭಿಸಬೇಕಾಗಿದ್ದು, ಅದರಂತೆ ಈ ಪ್ರಕ್ರಿಯೆಯ ಅಂತಿಮ ಹಂತದ ಅನುಷ್ಟಾನ ಕುರಿತು ಪರಿಷ್ಕೃತ ವೇಳಾಪಟ್ಟಿಯನ್ನು ಅಂತಿಮಗೊಳಿಸಿ ನಮೂನೆ-1 ರಂತೆ ನಿಗಧಿಪಡಿಸಲಾಗಿದೆ.

ನಮೂನೆ-1 ರಲ್ಲಿ ನೀಡಿರುವ ವೇಳಾಪಟ್ಟಿಯಲ್ಲಿ ನಿಗದಿಪಡಿಸಿದಂತೆ, ಸ್ಥಳಾಂತರ ಪ್ರಕ್ರಿಯೆ ಪೂರ್ಣಗೊಳಿಸಿ, ನಮೂನೆ-2 ರ ಪ್ರಕಾರ ಮಾಹಿತಿ ಭರ್ತಿ ಮಾಡಿ ಮಾಹಿತಿ/ವರದಿಯನ್ನು ದಿನಾಂಕ: 26.08.2013 ರಂದು ಇ.ಮೇಲ್ ಮೂಲಕ ಸಂಬಂಧಿಸಿದ ಆಯುಕ್ತಾಲಯಗಳ ನಿರ್ದೇಶಕರಿಗೆ ಹಾಗೂ ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು, ಇವರಿಗೆ ಕಳುಹಿಸತಕ್ಕದ್ದು.

**(ಕರಡು ಪತ್ರ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ನಿರ್ದೇಶಕರು (ಪ್ರೌಢ ಶಿಕ್ಷಣ)**
19/7/13

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ಶಿಕ್ಷಣ ವಾರ್ತೆ

ಪ್ರತಿಯನ್ನು:

1. ಮಾನ್ಯ ಸರ್ಕಾರದ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಬಹುಮಹಡಿಗಳ ಕಟ್ಟಡ ಇವರಿಗೆ ವಂದನಾಪೂರ್ವಕವಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ.
3. ನಿರ್ದೇಶಕರು (ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು.
4. ನಿರ್ದೇಶಕರು ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ.
5. ನಿರ್ದೇಶಕರು, ಆರ್.ಎಂ.ಎಸ್.ಎ, ಆಯುಕ್ತರ ಕಛೇರಿಯ ಪೂರಕ ಕಟ್ಟಡ, ಬೆಂಗಳೂರು
6. ಅಪರ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು
7. ವಿಭಾಗೀಯ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಪದನಿಮಿತ್ತ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ.
8. ಸಹನಿರ್ದೇಶಕರು (ಗುಣಮಟ್ಟ) ಸರ್ವ ಶಿಕ್ಷಣ ಅಭಿಯಾನ, ಆಯುಕ್ತರ ಕಛೇರಿಯ ಪೂರಕ ಕಟ್ಟಡ, ಬೆಂಗಳೂರು
9. ಇ-ಗವರ್ನೆನ್ಸ್ ಶಾಖೆ: ಆನ್-ಲೈನ್ ನಲ್ಲಿ ಕೌನ್ಸಿಲಿಂಗ್ ನಡೆಸಲು ಅನುಕೂಲವಾಗುವಂತೆ ಸೂಕ್ತ ತಂತ್ರಾಂಶ ಅಳವಡಿಸಿ ಖಾಲಿ ಹುದ್ದೆಗಳ ಮಾಹಿತಿಯನ್ನು ಪಡೆದು ವ್ಯವಸ್ಥೆಗೊಳಿಸುವುದು ಹಾಗೂ ಲೋಪದೋಷಗಳಿಗೆ ಅವಕಾಶವಾಗದಂತೆ ಕ್ರಮ ಮಾಡತಕ್ಕದ್ದು.

**ಅನುಬಂಧ – I**

ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಹೆಚ್ಚುವರಿ ಖಾಲಿ/ ಹುದ್ದೆ/ಶಿಕ್ಷಕರನ್ನು ಸ್ಥಳಾಂತರಿಸುವ ಪ್ರಕ್ರಿಯೆಯ ಪರಿಷ್ಕೃತ ವೇಳಾಪಟ್ಟಿ

| ಕ್ರ.ಸಂ | ವಿಷಯ | ದಿನಾಂಕ | ಕ್ರಮ |
|---|---|---|---|
| 1 | 2012–13ರ ದಾಖಲಾತಿ/ಹಾಜರಾತಿಯಂತೆ ಹೆಚ್ಚುವರಿ ಶಿಕ್ಷಕರ ಹುದ್ದೆ ಶಿಕ್ಷಕರ ಹುದ್ದೆಗಳ ಅಗತ್ಯವಿರುವ ಇರುವ ಶಾಲೆಗಳನ್ನು ಗುರುತಿಸುವುದು | ದಿನಾಂಕ:– 01–08–2013 ರಿಂದ 03–08–2013 | ಕ್ಷೇತ್ರ ಶಿಕ್ಷಣಾಧಿಕಾರಿ |
| 2 | 2012–13 ದಾಖಲಾತಿಯಂತೆ ಹೆಚ್ಚುವರಿ ಹುದ್ದೆ/ಶಿಕ್ಷಕರ ಅಗತ್ಯವಿರುವ ಶಾಲೆಗಳನ್ನು ಗುರುತಿಸಿ ಆನ್ ಲೈನ್ ನಲ್ಲಿ ಡಾಟಾ ಎಂಟ್ರಿ ಮಾಡಿ ವ್ಯಾಲಿಡೇಷನ್ ಪೂರ್ಣಗೊಳಿಸುವುದು. | | |
| 3 | ಹೆಚ್ಚುವರಿ ಖಾಲಿ ಹುದ್ದೆ/ಶಿಕ್ಷಕರ ಪಟ್ಟಿ/ಅವಶ್ಯವಿರುವ ಹುದ್ದೆಗಳ ಪಟ್ಟಿ ಸಂಬಂಧಿಸಿದ ಉಪನಿರ್ದೇಶಕರ ಕಛೇರಿಯಲ್ಲಿ ಅನುಮೋದಿಸುವುದು. | 05–08–2013 | ಉಪನಿರ್ದೇಶಕರಿಂದ ಅನುಮೋದನೆ |
| 4 | ಹೆಚ್ಚುವರಿ ಇರುವ ಖಾಲಿ ಹುದ್ದೆಗಳ ಪ್ರಕಟಣೆ/ಹೆಚ್ಚುವರಿ ಶಿಕ್ಷಕರ ಅವಶ್ಯಕತೆ ಇರುವ ಶಾಲೆಗಳ ಪಟ್ಟಿ ಪ್ರಕಟಣೆ | 07–08–2013 | ಆಯಾ ಬಿ.ಇ.ಓ/ ಉಪನಿದೇಶಕರು |
| 5 | ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿ ಪ್ರಕಟಣೆ | 09–08–2013 | ಆಯಾ ಬಿ.ಇ.ಓ/ ಉಪನಿದೇಶಕರು |
| 6 | ಸಂಬಂಧಿಸಿದ ಶಿಕ್ಷಕರಿಂದ ಆಕ್ಷೇಪಣೆಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ದಿನಾಂಕ | 15–08–2013 | ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ |
| 7 | ಆಕ್ಷೇಪಣೆಗಳ ಪರಿಶೀಲನೆ | 16–08–2013 | ಬಿ.ಇ.ಓ ಉಪನಿರ್ದೇಶಕರು |
| 8 | ಹೆಚ್ಚುವರಿ ಶಿಕ್ಷಕರ ಅಂತಿಮ ಪಟ್ಟಿಯ ಪ್ರಕಟಣೆ | 18–08–2013 | ಬಿ.ಇ.ಓ ಉಪನಿರ್ದೇಶಕರು |
| 9 | ಹೆಚ್ಚುವರಿ ಖಾಲಿ ಹುದ್ದೆಗಳ ಸ್ಥಳಾಂತರ | 20–08–2013 | ಉಪನಿರ್ದೇಶಕರು (ಆ) |
| 10 | ಹೆಚ್ಚುವರಿ ಶಿಕ್ಷಕರಿಗೆ ಕೌನ್ಸಿಲಿಂಗ್ ನಡೆಸುವುದು ಆದೇಶ ನೀಡುವುದು. ಕೌನ್ಸಿಲಿಂಗ್‌ಗೆ ಗೈರು ಹಾಜರಾದ ಶಿಕ್ಷಕರಿಗೆ ಡಮ್ಮಿ ಕೌನ್ಸಿಲಿಂಗ್ ಮಾಡಿ ಆದೇಶ ಹೊರಡಿಸುವುದು. | 22–08–2013 ರಿಂದ 24–08–2013 | ಬ್ಲಾಕ್ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ |
| 11 | ಅಂತಿಮವಾಗಿ ಆಯುಕ್ತರ ಕಚೇರಿಗೆ ವರದಿ ಮಾಡುವುದು. | 26–08–2013 | ಉಪನಿರ್ದೇಶಕರು |

ನಿರ್ದೇಶಕರು (ಪ್ರೌಢ ಶಿಕ್ಷಣ)

1/7/13